## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ:ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಳ್ಳಾರಿ ಮತ್ತು ಶ್ರೀ ಡಿ. ವೆಂಕಟರಮಣ, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಶ್ರೀ ಜಾಕೀರ್ ಹುಸೇನ್, ಕಿರಿಯ ಇಂಜಿನಿಯರ್, ಪಂ. ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಕುರಿತು ಅಂತಿಮ ಆದೇಶದ ಬಗ್ಗೆ.

ಓದಲಾಗಿದೆ: 1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿರವರ ಪತ್ರ ಸಂಖ್ಯೆ:ಜಿಪಂಬ:ಸಿಬ್ಬಂದಿ-4:ಸಿಸಿಎ-15/2012-13 ದಿ 18.09.2012.
2) ಸರ್ಕಾರದ ಕಾರಣ ಕೇಳುವ ನೋಟೀಸು ದಿ 06.02.2013.
3) ಡಾ:ರಾಧಾಕೃಷ್ಣರೆಡ್ಡಿ, ಶ್ರೀ ಡಿ. ವೆಂಕಟರಮಣ ಹಾಗೂ ಶ್ರೀ ಜಾಕೀರ್ ಹುಸೇನ್ ಇವರ ಲಿಖಿತ ಹೇಳಿಕೆ ದಿ 25.03.2013, 25.02.2013 ಮತ್ತು ದಿ 23.02.2013
4) ಸರ್ಕಾರದ ಆದೇಶ ಸಂಖ್ಯೆ; ಗ್ರಾಅಪ 179 ವಿಸೇಬಿ 2012 ದಿ 21.01.2014.
5) ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿ 31.10.2014.
6) ಎರಡನೇ ಕಾರಣ ಕೇಳುವ ನೋಟೀಸ್ ದಿ 06.04.2015.
7) ಅಪಾದಿತರ ಲಿಖಿತ ಹೇಳಿಕೆಗಳು.

-----

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ-(1)ರ ದಿನಾಂಕ 18.09.2012ರ ಪತ್ರದಲ್ಲಿ ಬಳ್ಳಾರಿ ತಾಲೂಕು, ಎಂ. ಗೋನಾಳ ಗ್ರಾಮ ಪಂಚಾಯತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ 2010-11ನೇ ಸಾಲಿನಲ್ಲಿ ಒಂದೇ ಚೈನೇಜ್ ಇರುವ ರಸ್ತೆಯನ್ನು ಎರಡು ಕಾಮಗಾರಿಗಳನ್ನಾಗಿ ವಿಭಜಿಸಿ, ಎರಡು ಪ್ರತ್ಯೇಕವಾದ ಅಂದಾಜು ಪಟ್ಟಿಗಳನ್ನು ತಯಾರಿಸಿ, ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪದ ಮೇಲೆ ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

1) ಡಾ: ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಳ್ಳಾರಿ
2) ಶ್ರೀ ಡಿ.ವೆಂಕಟರಮಣ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂ. ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ.
3) ಶ್ರೀ ಜಾಕೀರ್ ಹುಸೇನ್, ಹಿಂದಿನ ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) ಪಂ. ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ.

ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲ್ಕಂಡ ಅಪಾದಿತರುಗಳಿಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) 1957ರ ನಿಯಮ 11ರಡಿ ಶಿಸ್ತು ಕ್ರಮ ಜರುಗಿಸಲು ಉದ್ದೇಶಿಸಿ ಮೇಲೆ ಕ್ರಮಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 06-02-2013ರಂದು ಅನುಬಂಧ-1 ರಿಂದ 4ನ್ನು ಒಳಗೊಂಡ ದೋಷಾರೋಪಣಾ ಪಟ್ಟಿಯೊಂದಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಮಾಡಲಾಗಿತ್ತು. ಸದರಿ ನೋಟೀಸಿಗೆ ಅಪಾದಿತ ಅಧಿಕಾರಿಗಳು ಮೇಲೆ ಓದಲಾದ ಕ್ರಮಸಂಖ್ಯೆ (3)ರಲ್ಲಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಿ ಅವರ ವಿರುದ್ಧದ ಆರೋಪವನ್ನು ನಿರಾಕರಿಸಿ ಆರೋಪಗಳನ್ನು

ಕೈಬಿಡಲು ಕೋರಿರುತ್ತಾರೆ. ಆರೋಪಿತ ಅಧಿಕಾರಿಗಳು ಸಲ್ಲಿಸಿರುವ ವಿವರಣೆಯು ಸಮರ್ಥನೀಯವಾಗಿರುವುದಿಲ್ಲವೆಂದು ತೀರ್ಮಾನಿಸಿ, ಸದರಿ ಅಧಿಕಾರಿಗಳ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸಲು ಸರ್ಕಾರವು ನಿರ್ಧರಿಸಿ ಮೇಲೆ ಕ್ರಮಸಂಖ್ಯೆ-(4)ರಲ್ಲಿ ಓದಲಾದ ದಿನಾಂಕ 06.02.2013ರ ಆದೇಶದಲ್ಲಿ ಶ್ರೀ ಫ.ಸಿ. ಗುಡ್ಡಾಕಾರ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಧಾರವಾಡ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಯವರು ದಿನಾಂಕ 31.10.2014ರಂದು ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯ ಅನುಸಾರ ಅಪಾದಿತರ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರ ವಿಫಲವಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಸರ್ಕಾರವು ವಿಚಾರಣಾಧಿಕಾರಿಯವರ ನಿರ್ಣಯವನ್ನು ಒಪ್ಪದೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮ 1957ರ ನಿಯಮ 11(ಎ) ರಡಿಯಲ್ಲಿ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಅಪಾದಿತರಿಗೆ ಮೇಲೆ ಒದಲಾದ ಕ್ರಮ ಸಂಖ್ಯೆ-(5)ರ ದಿನಾಂಕ 06.04.2015ರಂದು ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಸದರಿ ನೋಟೀಸಿಗೆ ಅಪಾದಿತರು ಲಿಖಿತ ಹೇಳಿಕೆಗಳನ್ನು ಸಲ್ಲಿಸಿ ತಮ್ಮ ವಿರುದ್ದದ ಆರೋಪಗಳನ್ನು ನಿರಾಕರಿಸಿ, ಆರೊಪಮುಕ್ತರನ್ನಾಗಿ ಮಾಡುವಂತೆ ಕೋರಿರುತ್ತಾರೆ.

ಪ್ರಕರಣದಲ್ಲಿ ಭಾಗಿಯಾಗಿರುವ ಅಪಾದಿತರ ವಿರುದ್ದದ ಆರೋಪಗಳು, ಅವರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳು, ವಿಚಾರಣಾ ವರದಿ ಮತ್ತು ಸಂಬಂದಿಸಿದ ದಾಖಲೆಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಪ್ರಕರಣದಲ್ಲಿ ಪ್ರಮುಖವಾಗಿ ಒಂದೇ ಕಾಮಗಾರಿಗೆ ಎರಡು ಬೇರೆ ಬೇರೆ ಅಂದಾಜು ಪಟ್ಟಿ ತಯಾರಿಸುವ ಮೂಲಕ, ಹಣ ದುರುಪಯೋಗಕ್ಕೆ ಕಾರಣರಾಗಿದ್ದಾರೆಂಬುದು ಅಪಾದಿತರ ಮೇಲಿನ ಆರೋಪವಾಗಿದೆ. ಶ್ರೀ ಡಿ. ವೆಂಕಟರಮಣ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ ಮತ್ತು ಶ್ರೀ ಜಾಕೀರ್ ಹುಸೇನ್, ಹಿಂದಿನ ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ, ಇವರುಗಳು ಕಾಮಗಾರಿಯ ಸ್ಥಳ ಪರಿಶೀಲನೆ ನಡೆಸದೆ ಅಂದಾಜನ್ನು ತಯಾರಿಸಿ, ಅನುಮೋದಿಸಿದ ಕಾರಣ, ಅವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿದ್ದು, ಇದರಿಂದಾಗಿ ಹಣ ದುರುಪಯೋಗಕ್ಕೆ ಅವಕಾಶವಾಗಿದೆಂಬುದು ಆರೋಪವಾಗಿದೆ. ಈ ಇಬ್ಬರು ಅಪಾದಿತರುಗಳು ಕಾಮಗಾರಿ ಸ್ಥಳ ಪರಿಶೀಲನೆ ನಡೆಸದೆ, ಅಂದಾಜುಪಟ್ಟಿ ತಯಾರಿಸಿದ್ದರೂ ಸಹಾ ಅವರುಗಳು ಕಾಮಗಾರಿ ಅನುಷ್ಟಾನವಾಗದೇ ಪಾವತಿಸಿದ ಮೊತ್ತಕ್ಕೆ ಅವರನ್ನು ಜವಾಬ್ದಾರನ್ನಾಗಿಸುವುದು ಸೂಕ್ತವಾಗುವುದಿಲ್ಲ.

ವಾಸ್ತವವಾಗಿ ಪ್ರಕರಣದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರು ಇವರುಗಳು ಎನ್.ಎಂ.ಆರ್.ಗಳಿಗೆ ಸಹಿ ಮಾಡಿದ್ದು, ಅಂದಿನ ಕಾಯನಿರ್ವಾಹಕ ಅಧಿಕಾರಿಯವರು ಮೇಲು ರುಜು ಮಾಡಿರುವುದರಿಂದ, ಕಾಮಗಾರಿ ಅನುಷ್ಟಾನಗೊಳ್ಳದೆ ಇದ್ದರೂ ಸಹಾ ಕೂಲಿ ಪಾವತಿ ಮಾಡಲು ರೂ.3,21,500/- ಗಳನ್ನು ಪಡೆಯಲು ಅವಕಾಶವಾಗಿದೆ. ಆದರೆ ಈ ಅಂಶವು ತಮ್ಮ ಗಮನಕ್ಕೆ ಬಂದ ಕೂಡಲೇ ಸದರಿ ಮೊತ್ತವನ್ನು ಪಾವತಿಯಾಗದಂತೆ ತಡೆಹಿಡಿಯಲು ಕ್ರಮವಹಿಸಿರುವುದಾಗಿ ಡಾ:ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಳ್ಳಾರಿ ಇವರು ತಿಳಿಸಿರುತ್ತಾರೆ. ಆದರೆ ಇದಕ್ಕೆ ಪೂರಕವಾಗಿ ಅವರು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಬಳ್ಳಾರಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಕಾಮಗಾರಿ ನಿರ್ವಹಣೆ ಆಗದೇ ಇದ್ದರೂ, ಹಣ ಪಡೆದುಕೊಂಡಿರುವ ಬಗ್ಗೆ

ಕ್ರಿಮಿನಲ್ ಮೊಕದ್ದಮೆ ದಾಖಲಾದ ಹಿನ್ನಲೆಯಲ್ಲಿ, ಕೂಲಿ ಹಣ ಪಾವತಿಯನ್ನು ತಡೆಹಿಡಿಯಲಾಗಿದೆಂದು ವರದಿ ಮಾಡಿರುತ್ತಾರೆ. ಹಾಗಾಗಿ ಕೂಲಿ ಪಾವತಿಗಾಗಿ ಪಡೆದಿರುವ ಹಣವು ಪಾವತಿಯಾಗದೇ ಬಾಕಿ ಉಳಿದಿರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿಯವರು ತಮ್ಮ ಕಾರ್ಯನಿರ್ವಹಣೆಯಲ್ಲಿ ವಿಫಲರಾಗಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಅಲ್ಲದೇ ಇದೇ ಕಾಮಗಾರಿಯ ಸಾಮಾಗ್ರಿ ಸರಬರಾಜುದಾರರಿಗೆ ರೂ.1,84,982/-ಗಳನ್ನು ಪಾವತಿಸಲಾಗಿದ್ದು, ವಾಸ್ತವವಾಗಿ ಕಾಮಗಾರಿ ನಿರ್ವಹಣೆ ಆಗದೇ ಇರುವುದರಿಂದ ಸದರಿ ಮೊತ್ತವನ್ನು ಸಂಬಂಧಪಟ್ಟವರಿಂದ ಅಂದರೆ ಪಂಚಾಯತ ಅಬಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಡಾ. ರಾಧಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಇವರುಗಳಿಂದ ಅವರುಗಳ ಜವಾಬ್ದಾರಿಗೆ ಅನುಗುಣವಾಗಿ ಕ್ರಮವಾಗಿ ಶೇ.45, 45 ಮತ್ತು 10ರ ಅನುಪಾತದಲ್ಲಿ ವಸೂಲು ಮಾಡಲು ತೀರ್ಮಾನಿಸಿದೆ.

ಈ ಪ್ರಕರಣದದಲ್ಲಿ ನೇರವಾಗಿ ಹಣ ಪಡೆದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಅದ್ಯಕ್ಷರ ವಿರುದ್ಧ ಕ್ರಮ ಕೈಗೊಂಡ ಬಗ್ಗೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ ಇವರು ಸರ್ಕಾರಕ್ಕೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಇವರುಗಳು ಪ್ರಮುಖವಾಗಿ ಹಣ ದುರುಪಯೋಗಕ್ಕೆ ಕಾರಣವಾಗಿರುವುದರಿಂದ ನಿಯಾಮಾನುಸಾರ ಅವರುಗಳ ವಿರುದ್ಧ ಶಿಸ್ತು ಕ್ರಮ ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮವಹಿಸಿ ಹಣ ವಸೂಲು ಮಾಡಲು ಕ್ರಮಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ರವರಿಗೆ ಸೂಚಿಸಿದೆ.

ಮೇಲಿನ ವಿವರಗಳ ಅನುಸಾರ, ಪ್ರಕರಣದಲ್ಲಿ ಭಾಗಿಯಾಗಿರುವ ಅಪಾದಿತರುಗಳ ವಿರುದ್ಧ ಸಾಬೀತಾಗಿರುವ ಆರೋಪಗಳಿಗೆ ಸಂಬಂಧಿಸಿದಂತೆ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 179 ವಿಸೇಬಿ 2012 ಬೆಂಗಳೂರು, ದಿನಾಂಕ:-29.02.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಶ್ರೀ ಡಿ. ವೆಂಕಟರಮಣ, ಹಿಂದಿನ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂ. ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ.ಮತ್ತು ಶ್ರೀ ಜಾಕೀರ್ ಹುಸೇನ್, ಹಿಂದಿನ ಕಿರಿಯ ಇಂಜಿನಿಯರ್ (ವಿಶೇಷ ದರ್ಜೆ) ಪಂ. ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ. ಇವರುಗಳಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(iii)ರನ್ವಯ ಕಾಲಿಕ ವೇತನ ಶ್ರೇಣಿಯಲ್ಲಿ **"ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಹೊಂದದಂತೆ ತಡೆಹಿಡಿಯುವ ದಂಡನೆ"** ಯನ್ನು ವಿಧಿಸಿ, ಆದೇಶಿಸಿದೆ.

ಶ್ರೀ ಡಾ:ರಾಧಾಕೃಷ್ಣರೆಡ್ಡಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಳ್ಳಾರಿ, ಇವರಿಗೆ ಕ್ರಮಾಂಕ ಗ್ರಾಅಪ 179 ವಿಸೇಬಿ 2012 ದಿನಾಂಕ 06.02.2013ರ ಕಾರಣ ಕೇಳುವ ನೋಟೀಸಿನ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂದಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(ii)ರಡಿ ಪ್ರದತ್ತವಾದ ಅಧಿಕಾರದನ್ವಯ **"ವಾಗ್ದಂಡನೆ"** ವಿಧಿಸಿ, ಆದೇಶಿಸಿದೆ. ಮತ್ತು ಸಾಮಾಗ್ರಗಳ ಸರಬರಾಜುದಾರರಿಗೆ ಪಾವತಿಸಿರುವ ಮೊತ್ತ ರೂ.1,84,982/-ಗಳ ಪೈಕಿ ಶೇ.10ರಷ್ಟನ್ನು ಅಂದರೆ ರೂ.18,498/-ಗಳನ್ನು ಸದರಿ ನಿಯಮಗಳ ನಿಯಮ 8(iv)ರನ್ವಯ ವಸೂಲು ಮಾಡುವುದು.

ಸರ್ಕಾರಕ್ಕೆ ಉಂಟಾದ ನಷ್ಟದ ಉಳಿದ ಮೊತ್ತವನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರು, ಇವರುಗಳಿಂದ ಸಾಮಗ್ರಿಗಳ ಸರಬರಾಜುದಾರರಿಗೆ ಪಾವತಿಸಿರುವ ಮೊತ್ತ ರೂ. 1,84,982/-ಗಳ ಪೈಕಿ ಶೇ.90ರಷ್ಟನ್ನು ಸಮನಾಗಿ ವಸೂಲು ಮಾಡಲು ಕ್ರಮವಹಿಸುವಂತೆ ಮುಖ್ಯ ಕಾರ್ಯನಿವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

29/2/16

(ಎಸ್. ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ.
3) ಸಂಬಂಧಿಸಿದ ಅಧಿಕಾರಿಗಳಿಗೆ. (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಮುಖಾಂತರ).

ಪ್ರತಿಯನ್ನು

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) / ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.